# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 406 |
| ಸದಸ್ಯರ ಹೆಸರು : | ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 12-12-2018 |
| ಉತ್ತರಿಸುವ ಸಚಿವರು : | ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಮರಳು ಅಭಾವದಿಂದ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದದ್ದಲ್ಲಿ, ಸರ್ಕಾರವು ಸಾರ್ವಜನಿಕರಿಗೆ ಅಗತ್ಯವಿರುವ ಮರಳು ಪೂರೈಕೆಗೆ ರೂಪಿಸಿರುವ ನೀತಿ/ ನಿಯಮಗಳೇನು. (ವಿವರ ಒದಗಿಸುವುದು) | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಿನಾಂಕ: 29-01-2011 ರಂದು ಹೊಸ ಮರಳು ನೀತಿ ಜಾರಿಗೆ ತರಲಾಗಿದೆ. ಈ ನೀತಿಯಡಿ ಮರಳು ಗಣಿಗಾರಿಕೆ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿತ್ತು.<br><br>ಸರ್ಕಾರವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ಕ್ಕೆ ದಿನಾಂಕ: 12-08-2016 ರಂದು ತಿದ್ದುಪಡಿಯನ್ನು ತಂದಿದ್ದು, ತಿದ್ದುಪಡಿ ನಿಯಮದಂತೆ ಲೋಕೋಪಯೋಗಿ ಇಲಾಖೆಯಿಂದ ಮರಳು ಗಣಿಗಾರಿಕೆ ಉಸ್ತುವಾರಿಯನ್ನು ಹಿಂಪಡೆದು, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಟೆಂಡರ್-ಕಂ-ಹರಾಜು ಮೂಲಕ 5 ವರ್ಷಗಳ ಅವಧಿಗೆ ಮರಳು ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>**ದಿನಾಂಕ:12.08.2016 ರ ಮರಳು ತಿದ್ದುಪಡಿ ನಿಯಮಗಳು ಪ್ರಮುಖಾಂಶಗಳು ಈ ಕೆಳಕಂಡಂತಿರುತ್ತವೆ.**<br><br>• ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ಉಸ್ತುವಾರಿಯನ್ನು ನಿಯಮ-31-ಖ ರಡಿಯಲ್ಲಿ ರಚಿತವಾಗಿರುವ ಜಿಲ್ಲಾ ಹಾಗೂ ತಾಲ್ಲೂಕು ಮರಳು ಉಸ್ತುವಾರಿ ಸಮಿತಿಗೆ ವಹಿಸಲಾಗಿರುತ್ತದೆ.<br><br>• ತಿದ್ದುಪಡಿ ನಿಯಮ-31-R(1) & (2) ರಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಗಳನ್ನು ರಚಿಸಲಾಗಿರುತ್ತದೆ. ಜಿಲ್ಲಾ ಮರಳು ಸಮಿತಿಗೆ ಆಯಾ ಜಿಲ್ಲಾ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಪೊಲೀಸ್ ಅಧೀಕ್ಷಕರು, ಪೊಲೀಸ್ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸಾರಿಗೆ ಇಲಾಖೆ, ಜಿಲ್ಲಾ ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿಗಳು, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಉಪವಿಭಾಗಾಧಿಕಾರಿಗಳು-ಕಂದಾಯ ಇಲಾಖೆ ಇವರುಗಳು ಸದಸ್ಯರುಗಳಾಗಿರುತ್ತಾರೆ.<br><br>• ತಾಲ್ಲೂಕು ಮರಳು ಉಸ್ತುವಾರಿ ಸಮಿತಿಗೆ ಉಪವಿಭಾಗಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿಗಳು- ತಾಲ್ಲೂಕು ಪಂಚಾಯತ್, ಆರಕ್ಷಕ ನಿರೀಕ್ಷಕರು-ಪೊಲೀಸ್ ಇಲಾಖೆ, ಸಹಾಯಕ ಕಾರ್ಯಪಾಲಕ ಅಭಿಯಂತರರು /ಸಹಾಯಕ ಇಂಜಿನಿಯರ್-ಲೋಕೋಪಯೋಗಿ |

| | | |
|---|---|---|
| | | ಇಲಾಖೆ, ವಲಯ ಅರಣ್ಯಾಧಿಕಾರಿ–ಅರಣ್ಯ ಇಲಾಖೆ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ–ಸಮಾಜ ಕಲ್ಯಾಣ ಇಲಾಖೆ, ಕಂದಾಯ ಅಧಿಕಾರಿಗಳು–ಕಂದಾಯ ಇಲಾಖೆ, ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ತಹಶೀಲ್ದಾರರು–ಕಂದಾಯ ಇಲಾಖೆ, ಇವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.<br>• ನಿಯಮ 31–S ರಂತೆ ಮರಳು ಗಣಿಗಾರಿಕೆಯಲ್ಲಿ ಗಣಿ ಗುತ್ತಿಗೆಗಳನ್ನು ನೀಡಲು ಮೀಸಲಾತಿಯನ್ನು ಕಲ್ಪಿಸಲಾಗಿದೆ.<br>• ನಿಯಮ 31–R ರ ಉಪ ನಿಯಮ 3(VIII) ರಂತೆ ಸರ್ಕಾರಿ ಕಾಮಗಾರಿಗಳಿಗೆ ಮರಳು ಬ್ಲಾಕ್‌ಗಳನ್ನು ಮೀಸಲಿರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ 2016 ರ ನಿಯಮ 31–X ರಂತೆ ಈಗಾಗಲೇ ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ನಡೆದು, ಕಾರ್ಯನಿರ್ವಹಿಸುತ್ತಿರುವ ಮರಳು ಬ್ಲಾಕ್‌ಗಳ ಅವಧಿಯು ಮುಗಿಯುವವರೆಗೂ ಸದರಿ ಮರಳು ಬ್ಲಾಕ್‌ಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದಲೇ ಮರಳು ಗಣಿಗಾರಿಕೆ ನಡೆಸಲು ಅವಕಾಶ ಕಲ್ಪಿಸಿದೆ.<br>• ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮತ್ತು ತಾಲ್ಲೂಕು ಮರಳು ಸಮಿತಿಯ ಎಲ್ಲಾ ಸದಸ್ಯರುಗಳಿಗೆ ನಿಯಮ 31–R ರ ಉಪನಿಯಮ 13 ರಂತೆ ನಿಯಮಾನುಸಾರ ಕ್ರಮ ಜರುಗಿಸಲು ಅಧಿಕಾರವನ್ನು ಕಲ್ಪಿಸಲಾಗಿದೆ.<br>• ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು, ತಗಲುವ ವೆಚ್ಚವನ್ನು ಭರಿಸಲು ಜಿಲ್ಲಾ ಮಟ್ಟದಲ್ಲಿ ಕಾರ್ಪಸ್ ಫಂಡ್ ಮುಖಾಂತರ ಅನುದಾನವನ್ನು ನೀಡಿ, ಬಳಕೆ ಮಾಡಲು ನಿಯಮ 31–z ರಲ್ಲಿ ಅವಕಾಶ ಕಲ್ಪಿಸಿದೆ.<br>• ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ನಿಯಮ 31–ZA ರಂತೆ ಅವಕಾಶ ಕಲ್ಪಿಸಲಾಗಿರುತ್ತದೆ<br>• ನಿಯಮ 31–Z಼ ರಂತೆ ಕರಾವಳಿ ಜಿಲ್ಲೆಗಳ ಕರಾವಳಿ ನದಿ ಪಾತ್ರದಲ್ಲಿ ಬರುವ ಮರಳು ದಿಬ್ಬಗಳಲ್ಲಿ ಸಾಂಪ್ರದಾಯಿಕ ಮರಳು ತೆಗೆಯುವವರಿಗೆ ದಿಬ್ಬಗಳಿಂದ ಮರಳನ್ನು ತೆರವುಗೊಳಿಸಲು ಅನುಮತಿ ನೀಡಲಾಗುತ್ತಿದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ–2017 ರಂತೆ ಕರಾವಳಿ ಜಿಲ್ಲೆಗಳ Non CRZ ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಸಾಂಪ್ರದಾಯಿಕವಾಗಿ ಮಾನವ ಶ್ರಮದಿಂದ ಮರಳು ದಿಬ್ಬಗಳನ್ನು ತೆರವುಗೊಳಿಸುವ ವ್ಯಕ್ತಿಗಳಿಗೆ ಮಾತ್ರ ಇ–ಹರಾಜು ಮೂಲಕ ಮರಳು ಗಣಿ ಗುತ್ತಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ.<br>• ರಾಜ್ಯದಲ್ಲಿ ನದಿ ಮರಳಿಗೆ, ಪರ್ಯಾಯವಾಗಿ ಎಂ–ಸ್ಯಾಂಡ್ ಉತ್ಪಾದನೆಯನ್ನು ಹೆಚ್ಚು ಮಾಡಿ, ನದಿ ಮರಳಿನ ಸಮಸ್ಯೆಯನ್ನು ಸರಿದೂಗಿಸಲು, 31– ZC ರಂತೆ |

| | | |
|---|---|---|
| | | ಎಂ–ಸ್ಯಾಂಡ್ ಘಟಕ ಹೊಂದಿರುವವರಿಗೆ ಹರಾಜು ರಹಿತವಾಗಿ ಕಲ್ಲುಗಣಿಗುತ್ತಿಗೆ ಮಂಜೂರು ಮಾಡಲು ವಿಶೇಷ ಅವಕಾಶವನ್ನು ಕಲ್ಪಿಸಲಾಗಿದೆ.<br>• ಸರ್ಕಾರವು ಎಂ–ಸ್ಯಾಂಡ್ ಘಟಕ ನಡೆಸುವವರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಜಾರಿಗೆ ತಂದಿರುತ್ತದೆ.<br>1. ರಾಜ್ಯದಲ್ಲಿ ಎಂ–ಸ್ಯಾಂಡ್ ಉತ್ಪಾದನೆಗಾಗಿ ರಾಜ್ಯ ಸರ್ಕಾರವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ–1994ರ ನಿಯಮಗಳಿಗೆ ತಿದ್ದುಪಡಿ ತರಲಾಗಿದ್ದು, ಅದರಂತೆ ಎಂ–ಸ್ಯಾಂಡ್ ಘಟಕ ಸ್ಥಾಪಿಸುವವರಿಗೆ ಗರಿಷ್ಠ 30 ವರ್ಷದವರೆಗೆ 50–00 ಎಕರೆ ವಿಸ್ತೀರ್ಣದವರೆಗೂ ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br>2. ಪ್ರಸ್ತುತ ಚಾಲ್ತಿ ಕ್ರಷರ್ ಘಟಕದವರು ಎಂ–ಸ್ಯಾಂಡ್ ಘಟಕಕ್ಕೆ ಪರಿವರ್ತನೆಗೊಂಡು ಎಂ–ಸ್ಯಾಂಡ್ ಉತ್ಪಾದನೆ ಪ್ರಾರಂಭಿಸಿದಲ್ಲಿ ಸದರಿಯವರು ಹೊಂದಿರುವ ಕಲ್ಲುಗಣಿ ಗುತ್ತಿಗೆಗಳ ಅವಧಿಯನ್ನು 30 ವರ್ಷಗಳಿಗೆ ವಿಸ್ತರಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.<br>3. ಎಂ–ಸ್ಯಾಂಡ್ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾನಿಲಯ ಹಾಗೂ ಲೋಕೋಪಯೋಗಿ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮರಳಿನ ಗುಣಮಟ್ಟದ ವಿಶ್ಲೇಷಣಾ ವರದಿಯನ್ನು ಪಡೆಯಲಾಗುತ್ತಿದೆ.<br>4. ಎಂ–ಸ್ಯಾಂಡ್ ಬಳಕೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಇಲಾಖೆಯಿಂದ ಆಕಾಶವಾಣಿ, ಬೆಂಗಳೂರು ರವರ ಮೂಲಕ ಜಿಂಗಲ್ಸ್‌ಗಳ ಪ್ರಸಾರ, ಸಂದರ್ಶನ ಕಾರ್ಯಕ್ರಮ, ಫೋನ್ ಇನ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದಲ್ಲದೆ ಪೋಸ್ಟರ್ಸ್, ಕರಪತ್ರ, ಫ್ಲೆಕ್ಸ್‌ಗಳನ್ನು ಮುದ್ರಿಸಿ ಎಂ–ಸ್ಯಾಂಡ್ ಉಪಯೋಗಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿರುತ್ತದೆ.<br>• ರಾಜ್ಯ ಸರ್ಕಾರವು ಮರಳಿನ ಕೊರತೆಯನ್ನು ಪೂರೈಸಲು ಹಾಗೂ ಕಡಿಮೆ ದರದಲ್ಲಿ ಸಾರ್ವಜನಿಕರಿಗೆ ಮರಳು ಲಭ್ಯವಾಗುವಂತೆ ಮಾಡಲು ವಿದೇಶದಿಂದ ಮರಳನ್ನು ಆಮದು ಮಾಡಿಕೊಳ್ಳಲು ನಿರ್ಧರಿಸಿ ದಿನಾಂಕ:16.11.2017 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ–1994 ತಿದ್ದುಪಡಿ ತಂದಿರುತ್ತದೆ. ತಿದ್ದುಪಡಿ ನಿಯಮ 31–ZF ಮತ್ತು 31–ZG ರಲ್ಲಿ ವಿದೇಶದಿಂದ ಆಮದು ಮಾಡಿಕೊಂಡ ಮರಳನ್ನು ಸಾರ್ವಜನಿಕರಿಗೆ ವಿತರಿಸಲು ಅವಕಾಶ ಕಲ್ಪಿಸಲಾಗಿದೆ. |
| ಆ | ಹಾಸನ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮರಳು ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಹಾಗೂ ಮರಳು ಪೂರೈಕೆಯ ಸ್ಥಳಗಳು ಯಾವುವು; ಮತ್ತು ಸರ್ಕಾರ ಪ್ರತಿ ಟನ್ ಮರಳಿಗೆ ನಿಗದಿಪಡಿಸಿರುವ | ಕೆ.ಎಂ.ಎಂ.ಸಿ.ಆರ್ 1994ರ ತಿದ್ದುಪಡಿ ಅಧಿನಿಯಮ 2016 ರಂತೆ 2018–19 ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ನದಿ ಪಾತ್ರದಲ್ಲಿ ಒಟ್ಟು 14, ಮರಳು ಬ್ಲಾಕ್‌ಗಳು, ಆಲೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ನದಿ ಪಾತ್ರದಲ್ಲಿ ಒಟ್ಟು 05, ಮರಳು ಬ್ಲಾಕ್‌ಗಳು ಮತ್ತು ಬೇಲೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ನದಿ ಪಾತ್ರದಲ್ಲಿ ಒಟ್ಟು 04 ಮರಳು ಬ್ಲಾಕ್‌ಗಳನ್ನು ಗುರುತಿಸಲಾಗಿರುತ್ತದೆ. ಸದರಿ ಮರಳು ಬ್ಲಾಕ್‌ಗಳನ್ನು ಟೆಂಡರ್ –ಕಂ – ಹರಾಜು ಮೂಲಕ ಮರಳು ಗಣಿಗಾರಿಕೆ ನಡೆಸಲು ಮಂಜೂರಾತಿ ನೀಡಲಾಗಿದ್ದು, ಜಿಲ್ಲಾ ಮರಳು |

ದರವೆಷ್ಟು:

ಸಮಿತಿ ಸಭೆಯಲ್ಲಿ ನಿಗಧಿಪಡಿಸಲಾದ ದರದಂತೆ ಮರಳನ್ನು ವಿಲೇವಾರಿ ಮಾಡಲಾಗುತ್ತಿದೆ.

**ಮರಳು ಬ್ಲಾಕ್‌ಗಳು ಹಾಗೂ ಮಾರಾಟದ ದರದ ವಿವರ ಈ ಕೆಳಕಂಡಂತಿರುತ್ತದೆ.**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | ಸರ್ವೆ.ನಂ | ನದಿ/ಹಳ್ಳ | ವಿಸ್ತೀರ್ಣ (ಎಕರೆಗಳಲ್ಲಿ) | ಮಾರಾಟ ದರ(ರೂಗಳಲ್ಲಿ) |
|---|---|---|---|---|---|---|---|
| 1 | ಹಾಸನ | ಸಕಲೇಶಪುರ | ಕೌಡಳ್ಳಿ | 42, 41, 40, 52, 10, 6, & 112, 111, | ಹೇಮಾವತಿ ನದಿ | 20-00 | 670 |
| | | | ಐಗೂರು-2 | 84, 86, 87, 88 | ಐಗೂರು ಹಳ್ಳ | 7-20 | 719 |
| | | | ಬ್ಯಾಗಡಿಹಳ್ಳಿ | 46, 68, 65, 34, 35, 36, 37 | ಬ್ಯಾಗಡಿಹಳ್ಳಿ ಹಳ್ಳ | 6-00 | 782 |
| | | | ಕೊಂತಲಾಪುರ-2 | 68, 69, 70, 73, 74, 75, 78 | ಕೊಂತಲಾಪುರ ಹಳ್ಳ | 5-00 | 1102 |
| | | | ಲಕ್ಕುಂದ | 41, 42, 43 | ಕುಪ್ಪಳ್ಳಿಹಳ್ಳ | 9-00 | 1106 |
| | | | ನಿಡಿಗೆರೆ | 110, 116 | ಐಗೂರುಹಳ್ಳ | 6-10 | 1108 |
| | | | ಹೆನ್ನಲಿ-1 | 20 | ಐಗೂರುಹಳ್ಳ | 8-00 | 1169 |
| | | | ಮಾವಿನ ಹಳ್ಳಿ | 10, 11, 61 | ಹೇಮಾವತಿ ನದಿ | 13-00 | 1176 |
| | | | ಐಗೂರು-1 | 84, | ಐಗೂರು ಹಳ್ಳ | 7-00 | 1177 |
| | | | ಮಾಗಲು | 45, 60 | ಹೇಮಾವತಿ ನದಿ | 14-00 | 1211 |
| | | | ಹೆನ್ನಲಿ-2 | 65, 67, 68, 69, 76, 79, 82 | ಐಗೂರುಹಳ್ಳ | 10-00 | 1217 |
| | | | ಹಾಲೇಬೇಲೂರು | 99, 98, 97, 95 | ಹೇಮಾವತಿ ನದಿ | 20-00 | 1535 |
| | | | ಮಳಲಿ | 54, 57, 80, 81, 82 | ಹೇಮಾವತಿ ನದಿ | 15-00 | 1795 |
| | | | ಕೂಗಲಮನೆ | 35, 33, 25, 24, 23, 22 | ಹೇಮಾವತಿನದಿ | 22-00 | 2406 |
| 2 | | ಆಲೂರು | ಹೆಮ್ಮಿಗೆ-1 | 24, 25, 19 | ಹೇಮಾವತಿ ನದಿ | 13-00 | 676 |
| | | | ಕಾಗನೂರು | 109, 110, 112, | ಹೇಮಾವತಿ ನದಿ | 5-00 | 1105 |
| | | | ಹರೀಹಳ್ಳಿ-1 | 65, 66, | ಹೇಮಾವತಿ ನದಿ | 13-00 | 1231 |
| | | | ಹ್ಯಾರಗಳಲೆ | 39, 48, 41, | ಹೇಮಾವತಿ ನದಿ | 13-00 | 1237 |
| | | | ಕೊಡಗಲವಾಡಿ | 26, 27, 28, 29, 30, | ಹೇಮಾವತಿ ನದಿ | 9-00 | 2466 |
| 3 | | ಬೇಲೂರು | ಗೊರವನಹಳ್ಳಿ | 1, 2, 5, 15, 25, | ಗೊರವನಹಳ್ಳಿ ಹೊಸಹಳ್ಳಿ ಹೇಮಾವತಿ ನದಿ | 20-00 | 778 |
| | | | ಹೊಸಹಳ್ಳಿ | 60, 59, 57, 56, 55, 24, 25, | ಹೇಮಾವತಿ ನದಿ | 16-00 | 1105 |
| | | | ನಾರ್ವೆ | 68, 78, 79, 81 56, | ನಾರ್ವೆ, ಗೊರವನಹಳ್ಳಿ ಹೇಮಾವತಿ ನದಿ | 16-00 | 1115 |
| | | | ಹುಂಬುದೇವರಹಳ್ಳಿ | 272, 274, 289, 307, 308, | ಹೇಮಾವತಿ ನದಿ | 18-00 | 2500 |

ಇ ರಾಜ್ಯ ಸರ್ಕಾರವು ಕಳೆದ 2 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ

2016-17ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಸರ್ಕಾರಿ ಹಾಗೂ ಸಾರ್ವಜನಿಕ ಕಾಮಗಾರಿಗಳಿಗಾಗಿ ಅಂದಾಜು **6.0** ಲಕ್ಷ ಮೆ.ಟನ್ ಮರಳಿನ ಬೇಡಿಕೆ ಇರುತ್ತದೆ.

| | | |
|---|---|---|
| | ಎಷ್ಟು ಟನ್ ಮರಳು ಪೂರೈಕೆಗೆ ಬೇಡಿಕೆ ಇತ್ತು: ಎಷ್ಟು ಟನ್ ಮಾರಾಟ ಮಾಡಲಾಗಿದೆ: ಬೇಡಿಕೆಯಂತೆ ಪೂರ್ಣವಾಗಿ ಮರಳು ಪೂರೈಸಲಾಗಿದೆಯೇ ? (ವಿವರ ನೀಡುವುದು) | ಲೋಕೋಪಯೋಗಿ ಇಲಾಖೆಯಿಂದ ಅಂದಾಜು **2.32** ಲಕ್ಷ ಮೆ.ಟನ್ ನದಿ ಮರಳನ್ನು ಹಾಗೂ 0.09 ಲಕ್ಷ ಮೆ.ಟನ್ ಎಂ–ಸ್ಯಾಂಡ್ ನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ.<br><br>2017–18ನೇ ಸಾಲಿನಲ್ಲಿ ಅಂದಾಜು 6.88 ಲಕ್ಷ ಮೆ.ಟನ್‌ಗಳಲ್ಲಿ ಮರಳಿನ ಬೇಡಿಕೆಯಿದ್ದು, ಲೋಕೋಪಯೋಗಿ ಇಲಾಖೆಯಿಂದ 0.22 ಲಕ್ಷ ಮೆ.ಟನ್‌ಗಳಲ್ಲಿ ಮರಳನ್ನು ಹಾಗೂ 0.20 ಲಕ್ಷ ಮೆ.ಟನ್ ಎಂ–ಸ್ಯಾಂಡ್ ನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ.<br><br>ಅಲ್ಲದೇ ಹಾಸನ ಜಿಲ್ಲೆ ಪಕ್ಕದ ಜಿಲ್ಲೆಗಳಾದ ತುಮಕೂರು, ಚಿಕ್ಕಮಗಳೂರು ಉಡುಪಿ ಹಾಗೂ ಇನ್ನಿತರ ಜಿಲ್ಲೆಗಳಿಂದ ಎಂ–ಸ್ಯಾಂಡ್ ಹಾಗೂ ನದಿ ಮರಳು ಸಾರ್ವಜನಿಕರು ಸರ್ಕಾರಿ ಕಾಮಗಾರಿಗಳಿಗೆ ಸರಬರಾಜು ಪೂರೈಕೆಯಾಗುತ್ತಿರುತ್ತದೆ. |

ಸಂಖ್ಯೆ: ಸಿ.ಐ 446 ಎಂ.ಎಂ.ಎನ್ 2018

(ರಾಜಶೇಖರ.ಬಿ.ಪಾಟೀಲ್)
ಗಣಿ ಮತ್ತು ಭೂ ವಿಜ್ಞಾನ ಇಲಾಖೆ
ಮುಜರಾಯಿ ಸಚಿವರು